POLICE NEWS REGISTERED KA/BGW-1618/2024-26 REGD. WITH RNI NO. 36669/82 PAGE 6 POSTED AT BANGALORE PSO BG 560026 Every Tuesday Publishing Date : 6.10.2024

# ಭೈರಾದೇವಿ ರಿವೆಂಜ್ ಕಥೆಯಲ್ಲಿ ಅಘೋರಿ ಎಂಟ್ರಿ

ಇದೇ ಮೊದಲಬಾರಿಗೆ ರಾಧಿಕಾ ಕುಮಾರಸ್ವಾಮಿ ಅವರು ಹೆಣ್ಣು ಅಘೋರಿಯಾಗಿ ಅಭಿನಯಿಸಿರುವ ಭೈರಾದೇವಿ ಚಿತ್ರಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ನೊಂದ ಹೆಣ್ಣಿನ ಆತ್ಮವೊಂದರ ದ್ವೇಷದ ಕಥೆಯನ್ನು ನಿರ್ದೇಶಕ ಶ್ರೀಜೈ ಅವರು ಕುರೂಹಲಕರವಾಗಿ ನಿರೂಪಿಸಿದ್ದಾರೆ. ಈ ಕಥೆಗೆ ಅಘೋರಿ ಪಾತ್ರವನ್ನು ಲಿಂಕ್ ಮಾಡಿರುವುದೇ ವಿಶೇಷ. ಡಿಸಿಪಿ ಅರವಿಂದ್ (ರಮೇಶ್ ಅರವಿಂದ್), ಆತನ ಪತ್ನಿ ಶಾಲಿನಿ(ಅನು ಪ್ರಭಾಕರ್)ಆಕೆಯ ತಂಗಿ ಭೂಮಿಕ(ರಾಧಿಕಾ) ಈ ಮೂರು ಪಾತ್ರಗಳ ಸುತ್ತ ನಡೆಯುವ ಹಾರರ್ ರಿವೇಂಜ್ ಕಥೆಯನ್ನು ಥ್ರಿಲ್ಲಿಂಗ್ ಆಗಿ ಹೇಳುವ ಪ್ರಯತ್ನ ಮಾಡಲಾಗಿದೆ.



ಹೆತ್ತವರನ್ನು ಕಳೆದುಕೊಂಡಿದ್ದ ಭೂಮಿಕಾ, ಅಕ್ಕನ ಮನೆಯಲ್ಲೇ ಇರುತ್ತಾಳೆ. ಅದೇಕೋ ಭೂಮಿಕಾ ಮೇಲೆ ಅರವಿಂದ್‌ಗೆ ಪ್ರೀತಿ ಬೆಳೆಯುತ್ತಾ ಹೋಗುತ್ತೆ, ಆದರೆ ಭೂಮಿಕಾ ಅಕ್ಕ, ಭಾವನನ್ನು ತನ್ನತಂದೆ, ತಾಯಿ ಅಂತಲೇ ತಿಳಿದುಕೊಂಡಿರುತ್ತಾಳೆ. ಭೂಮಿಕಾ ಕಾಲೇಜೊಂದರಲ್ಲಿ ಪ್ಯಾರಾ ನಾರ್ಮಲ್ ಸೈನ್ಸ್ ವಿಭಾಗದ ಗೆಸ್ಟ್ ಲೆಕ್ಚರರ್ ಆಗಿ ಕೆಲಸ ಮಾಡುತ್ತಿರ್‍ತಾಳೆ. ತಮ್ಮನ್ನೇ ತಂದೆ, ತಾಯಿ ಎಂದುಕೊಂಡಿದ್ದ ಭೂಮಿಕಳನ್ನು ತನ್ನ ಗಂಡ ಬಯಸುತ್ತಿರುವುದು ಶಾಲಿನಿಗೆ ನುಂಗಲಾರದ ತುತ್ತಾಗುತ್ತದೆ. ಗಂಡನಿಗೆಷ್ಟು ತಿಳಿ ಹೇಳಿದರೂ ಅದನ್ನ ಕೇಳಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಅರವಿಂದ್ ಇರಲ್ಲ. ಇದೇ ನೋವಿನಲ್ಲಿ ಶಾಲಿನಿ ತನ್ನ ಮನೆ ಮೇಲಿಂದ ಬಿದ್ದು ಸಾವನ್ನಪ್ಪುತ್ತಾಳೆ. ಅಕ್ಕನ ಸಾವಿನ ಹಿನ್ನೆಲೆ ಅರಿತ ಶಾಲಿನಿ, ಅದರ ಬಗ್ಗೆ ದೂರು ನೀಡಲು ಕಮೀಷನರ್ ಆಫೀಸ್‌ಗೆ ಹೋಗುವಾಗ ಸ್ಕೂಟರ್ ಅಫಘಾತದಲ್ಲಿ ಮರಣಿಸುತ್ತಾಳೆ. ನಂತರ ಅರವಿಂದ್ ಮಗಳನ್ನು ಬೋರ್ಡಿಂಗ್ ಶಾಲೆಗೆ ಸೇರಿಸುತ್ತಾನೆ. ಮನೆಯಲ್ಲಿ ಆಗಾಗ ನಡೆಯುವ ಚಿತ್ರ ವಿಚಿತ್ರ ಘಟನೆಗಳ ಬಗ್ಗೆ ವಿಚಾರಿಸಿದಾಗ ಶಾಲಿನಿಯೇ ಪ್ರೇತವಾಗಿ ಕಾಡುತ್ತಿದ್ದಾಳೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆಗ ಅರವಿಂದ್ ಜೀಪ್ ಡ್ರೈವರ್ ವೀರಯ್ಯ(ರಂಗಾಯಣ ರಘು) ವಾರಣಾಸಿಯಲ್ಲಿ ಪುರೋಹಿತರಾಗಿರುವ ವ್ಯಕ್ತಿ(ಶಿವರಾಮಣ್ಣ) ಯೊಬ್ಬರು ಎಂಥ ದೆವ್ವದ ಕಾಟವಾದರೂ ಅದಕ್ಕೆ ಪರಿಹಾರ ತೋರಿಸ್ತಾರೆ ಎಂದು ಸಲಹೆ ನೀಡುತ್ತಾನೆ.

ಇಬ್ಬರೂ ವಾರಣಾಸಿಗೆ ಹೋದಾಗ ಅವರು ಬಾಬಾ ಸ್ವಾಮಿನಾಥ(ರವಿಶಂಕರ್) ಮತ್ತವರ ಶಿಷ್ಯೆ ಭೈರಾದೇವಿ(ರಾಧಿಕಾ ಕುಮಾರಸ್ವಾಮಿ)ಯನ್ನ ಭೇಟಿ ಮಾಡಿಸುತ್ತಾರೆ. ಭಂಗಿ ಸೇದುವ, ಶವಭಕ್ಷಣೆ ಮಾಡುವ ಅಘೋರಿ ಬಾಬಾ ಬಳಿ ಅರವಿಂದ್ ತನ್ನ ಸಮಸ್ಯೆಯನ್ನು ಹೇಳಿಕೊಳ್ಳುತ್ತಾನೆ. ನಿಮ್ಮ ಸಮಸ್ಯೆಗೆ ಭೈರಾದೇವಿ ಪರಿಹಾರ ನೀಡುತ್ತಾಳೆಂದು ಆಕೆಯನ್ನು ಅರವಿಂದ್ ಜೊತೆ ಸ್ವಾಮಿನಾಥ ಕಳಿಸುತ್ತಾನೆ. ಮಂತ್ರ ಶಕ್ತಿಯಿಂದ ಆ ಅತೃಪ್ತ ಆತ್ಮವನ್ನು ಕಟ್ಟಿಹಾಕಲು ಮುಂದಾಗುವಾಗ ಭೈರಾದೇವಿಗೆ ಕಠೋರ ಸತ್ಯವೊಂದು ಕಂಡುಬರುತ್ತದೆ. ಆದರೆ ಆ ಆತ್ಮ ಯಾರದು... ಶಾಲಿನಿ ಸತ್ತಿದ್ದು ಹೇಗೆ... ಭೂಮಿಕ ಸಾವು ಆಕಸ್ಮಿಕವೇ, ಕೊಲೆಯೇ ಈ ಎಲ್ಲ ಘಟನೆಗಳಿಗೂ ಅರವಿಂದ್‌ಗೂ ಇರುವ ಸಂಬಂಧ ಏನು? ಈ ಎಲ್ಲ ಪ್ರಶ್ನೆಗಳಿಗೆ ಭೈರಾದೇವಿಯ ಕ್ಲೈಮ್ಯಾಕ್ಸ್‌ನಲ್ಲಿ ಉತ್ತರವಿದೆ.

ಇಡೀ ಚಿತ್ರದ ಕೇಂದ್ರಬಿಂದು ರಾಧಿಕಾ ಕುಮಾರಸ್ವಾಮಿ ಅವರ ಹೆಣ್ಣು ಅಘೋರಿಯ ಪಾತ್ರ, ಅವರು ಅಘೋರಿಯಾಗಿ ಪರಕಾಯ ಪ್ರವೇಶ ಮಾಡಿದ್ದಾರೆ. ವೇಷ , ಭೂಷಣದ ಜೊತೆಗೆ ಕಣ್ಣಲ್ಲೇ ತನ್ನ ನಟನಾ ಸಾಮರ್ಥ್ಯವನ್ನು ತೆರೆದಿಟ್ಟಿದ್ದಾರೆ. ನೃತ್ಯ, ಸಾಹಸ ದೃಶ್ಯಗಳಲ್ಲಿ ಅಬ್ಬರಿಸಿದ್ದಾರೆ. ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡಿರುವ ರಾಧಿಕಾ ಕುಮಾರಸ್ವಾಮಿ ಆ ಎರಡೂ ಪಾತ್ರಗಳನ್ನು ಅಷ್ಟೇ ಅಚ್ಚುಕಟ್ಟಾಗಿ ನಿರ್ವಹಿದ್ದಾರೆ. ರಮೇಶ್ ಅರವಿಂದ್ ಕೂಡ ನೆಗೆಟಿವ್ ಪಾತ್ರವನ್ನು ಚೆನ್ನಾಗಿಯೇ ನಿಭಾಯಿಸಿದ್ದಾರೆ. ನಟಿ ಅನು ಪ್ರಭಾಕರ್ ಕೂಡ ಅದ್ಭುತವಾಗಿ ಅಭಿನಯಿಸಿದ್ದಾರೆ. ಅಘೋರಿ ಬಾಬ ಆಗಿ ರವಿಶಂಕರ್ ಅವರು ತಮ್ಮ ಧ್ವನಿ, ಗತ್ತಿನಲ್ಲಿ ಅಬ್ಬರಿಸಿದ್ದಾರೆ. ಕಾಲೇಜು ವಿದ್ಯಾರ್ಥಿಯಾಗಿ ಸ್ಕಂದ ಅಶೋಕ್, ಟೀಚರ್ ಪಾತ್ರದಲ್ಲಿ ಮಾಳವಿಕಾ ಅವಿನಾಶ್, ಫಾದರ್ ಪಾತ್ರದಲ್ಲಿ ಸುಚೇಂದ್ರ ಪ್ರಸಾದ್ ಸೇರಿದಂತೆ ಎಲ್ಲರೂ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ನಿರ್ದೇಶಕ ಶ್ರೀಜೈ ಆಯ್ಕೆ ಮಾಡಿಕೊಂಡಿರುವ ಕಥಾವಸ್ತುವೇ ವಿಭಿನ್ನವಾಗಿದ್ದು, ಮುಖವಾಡದ ಬದುಕಿನ ಹಿಂದಿನ ರಹಸ್ಯ, ಸಂಬಂಧಗಳಲ್ಲಿ ಆಗುವ ಏರುಪೇರು, ಸಾವು ನೋವುಗಳ ಹಿಂದಿರುವ ರಹಸ್ಯ, ಸುಳ್ಳಿನ ಹಿಂದಿರುವ ಸತ್ಯವನ್ನು ಶೋಧಿಸಿರುವ ಶೈಲಿ ಮೆಚ್ಚುವಂಥದ್ದು, ಅಘೋರಿಗಳ ನಡುವಳಿಕೆ, ಕಾರ್ಯವೈಖರಿ, ಆತ್ಮಗಳ ದ್ವೇಷ, ತಪ್ಪಿಸಿಕೊಳ್ಳುವ ತಂತ್ರಗಾರಿಕೆ ಗಮನ ಸೆಳೆಯುತ್ತದೆ. ಸ್ಮಶಾನದಲ್ಲಿ ಚಿತ್ರೀಕರಿಸಿರುವ ಹಾಡು, ಸಾಹಸ ದೃಶ್ಯ ಮೈರೋಮಾಂಚನಗೊಳಿಸುತ್ತದೆ. ಚಿತ್ರಕ್ಕೆ ಬೆನ್ನೆಲುಬಾಗಿ ರವಿರಾಜ್ ಹಾಗೂ ಯಾದವ್ ಸಾತ್ ನೀಡಿದ್ದಾರೆ. ಸೆಂಥಿಲ್ ಪ್ರಶಾಂತ್ ಅವರ ಸಂಗೀತ ಅದ್ಭುತವಾಗಿದೆ. ವಾಲಿ ಅವರ ಕ್ಯಾಮೆರಾ ಕೈಚಳಕ ಅದ್ಭುತವಾಗಿದೆ.



# ಕನ್ನಡದ ಆ ನಟನೊಟ್ಟಿಗೆ ನಟಿಸುವ ಆಸೆಯಿದೆ

ಕರ್ನಾಟಕದ ಕರಾವಳಿ ಭಾಗದಿಂದ ಸಾಕಷ್ಟು ಜನ ನಟ-ನಟಿಯರು ಚಿತ್ರರಂಗಕ್ಕೆ ಬಂದಿದ್ದಾರೆ. ಬರುತ್ತಲೇ ಇದ್ದಾರೆ. ಮಂಗಳೂರು ಮೂಲದ ಕೃತಿ ಶೆಟ್ಟಿ ಈಗ ತೆಲುಗು, ತಮಿಳಿನಲ್ಲಿ ನಟಿಸುತ್ತಿದ್ದಾರೆ. ಕನ್ನಡ ಚಿತ್ರದಲ್ಲಿ ಕೂಡ ನಟಿಸುವ ಆಸೆ ವ್ಯಕ್ತಪಡಿಸಿದ್ದಾರೆ.

ಮಂಗಳೂರು ಮೂಲದ ಕೃತಿ ಶೆಟ್ಟಿ ತೆಲುಗಿನ 'ಉಪ್ಪೆನಾ' ಚಿತ್ರದಲ್ಲಿ ಮೋಡಿ ಮಾಡಿದ್ದರು. ಬಳಿಕ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದರು. ಮಂಗಳೂರು ಮೂಲದ ಚೆಲುವೆಗೂ ತುಳು ಮಾತನಾಡಲು ಬರುತ್ತದೆ. ಸದ್ಯ ಮೂರು ತಮಿಳು ಸಿನಿಮಾಗಳು ಆಕೆಯ ಕೈಯಲ್ಲಿದೆ.

ಮುಂಬೈನಲ್ಲಿ ಓದಿ ಬೆಳೆದಾಕೆ ಕೃತಿ. ಮೊದಲಿಗೆ ಹೃತಿಕ್ ರೋಷನ್ ನಟನೆಯ 'ಸೂಪರ್ 30' ಚಿತ್ರದ ಸಣ್ಣ ಪಾತ್ರದಲ್ಲಿ ನಟಿಸಿದ್ದರು. ಬಳಿಕ 'ಉಪ್ಪೆನಾ' ಸಿನಿಮಾ ಅವಕಾಶ ಸಿಕ್ಕಿತ್ತು. ಹಾಗಾಗಿ ಅಲ್ಲೇ ಹೆಚ್ಚು ಸಿನಿಮಾಗಳಲ್ಲಿ ನಟಿಸಿದರು. ಕೃತಿ ಪೋಷಕರು ಮಂಗಳೂರು ಮೂಲದವರು. ಹಾಗಾಗಿ ಬೆಂಗಳೂರು ಹಾಗೂ ಮಂಗಳೂರಿಗೆ ಆಕೆ ಆಗಾಗ್ಗೆ ಭೇಟಿ ಕೊಡುತ್ತಿರುತ್ತಾರೆ. ಆಕೆಯ ನೆಂಟರು ಸಾಕಷ್ಟು ಜನ ಬೆಂಗಳೂರಿನಲ್ಲಿ ಇದ್ದಾರಂತೆ. ಕನ್ನಡ ಮಾತನಾಡಲು ಬರಲ್ಲ, ಆದರೆ ಆದಷ್ಟು ಬೇಗ ಕಲಿಯುತ್ತೇನೆ ಎನ್ನುತ್ತಾರೆ. ಕನ್ನಡ ಚಿತ್ರದಲ್ಲಿ ನಟಿಸುವ ಆಸೆಯಿದೆ. ರಕ್ಷಿತ್ ಶೆಟ್ಟಿ ನನ್ನ ನೆಚ್ಚಿನ ಕನ್ನಡ ನಟ. ಅವರೊಟ್ಟಿಗೆ ಅವಕಾಶ ಸಿಕ್ಕರೆ ನಟಿಸುತ್ತೇನೆ. ಅದಕ್ಕೆ ಒಳ್ಳೆಯ ಕಥೆ ಬೇಕು ಎಂದಿದ್ದಾರೆ. ಕೃತಿ ಶೆಟ್ಟಿ ಈ ಹೇಳಿಕೆ ವೈರಲ್ ಆಗುತ್ತಿದೆ.

ರಕ್ಷಿತ್ ಶೆಟ್ಟಿ ನಟನೆಯ 'ಕಿರಿಕ್ ಪಾರ್ಟಿ' ಸಿನಿಮಾ ಬಹಳ ಇಷ್ಟ. ಮೂರು ಬಾರಿ ನೋಡಿದ್ದೇನೆ. ಅದರಲ್ಲಿ ರಕ್ಷಿತ್ ಶೆಟ್ಟಿ ನಟನೆ ಬಹಳ ಇಷ್ಟವಾಯಿತು ಎಂದು ಕೂಡ ಕೃತಿ ಹೇಳಿದ್ದರು. ಕನ್ನಡದಲ್ಲಿ ಆದಷ್ಟು ಬೇಗ ನಟಿಸಬೇಕು ಎನ್ನುವ ಇಂಗಿತ ವ್ಯಕ್ತಪಡಿಸಿದ್ದಾರೆ. ಕೃತಿ ಈಗಾಗಲೇ ಮಾಲಿವುಡ್‌ಗೆ ಎಂಟ್ರಿ ಕೊಟ್ಟಿದ್ದಾರೆ. ಮಲಯಾಳಂ 'ARM' ಚಿತ್ರದಲ್ಲಿ ಟೊವಿನೋ ಥಾಮಸ್ ಜೊತೆ ನಟಿಸಿದ್ದರು. ಬಹುಕೋಟಿ ವೆಚ್ಚದ ಆಕ್ಷನ್ ಅಡ್ವೆಂಚರಸ್ ಕಾಸ್ಟ್ಯೂಮ್ ಡ್ರಾಮಾದಲ್ಲಿ ಲಕ್ಷ್ಮಿ ಎನ್ನುವ ಪಾತ್ರದಲ್ಲಿ ಮಿಂಚಿದ್ದಾರೆ.

ಅಂದಾಜು 30 ಕೋಟಿ ರೂ. ಬಜೆಟ್ 'ARM' ಸಿನಿಮಾ 100 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿದೆ. ಮಾಲಿವುಡ್‌ನಲ್ಲಿ ಭರ್ಜರಿ ಸಕ್ಸಸ್ ಕಂಡಿದೆ. ಇನ್ನು ಹಿಂದಿಯಲ್ಲಿ ರಣ್ವೀರ್ ಸಿಂಗ್, ತೆಲುಗಿನಲ್ಲಿ ರಾಮ್‌ಚರಣ್ ಜೊತೆ ನಟಿಸುವ ಆಸೆಯನ್ನು ಕೃತಿ ವ್ಯಕ್ತಪಡಿಸಿದ್ದಾರೆ.



# ಆತ ಸೆಟ್‌ನಲ್ಲಿ ಹೊಡೆದಿದ್ದ!

ಲಿಂಗ ತಾರತಮ್ಯದ ಕುರಿತು, ಪುರುಷರಿಗೆ ಹೆಚ್ಚು ಆದ್ಯತೆ ನೀಡಿ, ಮಹಿಳೆಯರನ್ನು ಕಡೆಗಣಿಸಲಾಗುತ್ತದೆ ಎಂಬ ವಾದಗಳು ಆಗಾಗ ಕೇಳಿಬರುತ್ತಿರುತ್ತವೆ. ಈ ವಾದ-ವಿವಾದ ಸಿನಿಮಾ ಕ್ಷೇತ್ರದಲ್ಲೇ ಹೆಚ್ಚು. ಚಿತ್ರರಂಗದಲ್ಲಿ ನಟರಿಗೆ ಇರುವ ಸಂಭಾವನೆ, ಅವಕಾಶಗಳು, ಭದ್ರತೆ ನಟಿಯರಿಗೆ ಸಿಗುವುದಿಲ್ಲ ಎಂಬ ಮಾತಿದೆ. ಇದೀಗ ಆ ವಿಚಾರ ಮತ್ತೆ ಮನ್ನೆಲೆಗೆ ಬಂದಿದೆ. ಕನ್ನಡದ 'ತಮಸ್ಸು', 'ಐದೊಂದ್ಲ ಐದು' ಸೇರಿ ಏಲು ಭಾಷೆಗಳಲ್ಲಿ ಮಿಂಚಿರುವ ನಟಿ ಪದ್ಮಪ್ರಿಯ ತಮಗಾದ ನೋವು ತೋಡಿಕೊಳ್ಳುವ ಮೂಲಕ ಲಿಂಗ ತಾರತಮ್ಯದ ವಿರುದ್ಧ ಕಹಳೆ ಊದಿದ್ದಾರೆ. '2007ರಲ್ಲಿ ತಮಿಳು ಚಿತ್ರದ ಶೂಟಿಂಗ್‌ನ ಕೊನೆಯ ದಿನದಂದು, ನಿರ್ದೇಶಕನೊಬ್ಬ, ನೀನು ಸರಿಯಾಗಿ ನಟಿಸುತ್ತಿಲ್ಲ ಎಂಬ ಸೆಟ್‌ನಲ್ಲಿ ಎಲ್ಲರ ಮುಂದೆ ಕಪಾಳಕ್ಕೆ ಹೊಡೆದಿದ್ದ. ಆ ಬಗ್ಗೆ ದ್ವನಿ ಎತ್ತಿದ್ದ ನನ್ನನ್ನೇ ಎಲ್ಲರೂ ದೂರಿದ್ದರು. ಜತೆಗೆ ಅದರಿಂದ ಅವಕಾಶಗಳೂ ಕಡಿಮೆಯಾದವು' ಎಂದು ಪದ್ಮಪ್ರಿಯ ಹೇಳಿಕೊಂಡಿದ್ದಾರೆ. ಹಾಗೇ, 'ನಟರಿಗೆ ಯೋಧ, ಗ್ಯಾಂಗ್‌ಸ್ಟರ್, ವಕೀಲ ಹೀಗೆ ನಾನಾ ಪತ್ರಗಳನ್ನು ನೀಡುತ್ತಾರೆ. ಆದರೆ, ನಟಿಯರನ್ನು ಕೇವಲ ಡ್ಯಾನ್ಸ್, ಗ್ಲಾಮರ್‌ಗೆ ಸೀಮಿತ ಮಾಡುತ್ತಾರೆ. ಈ ತಾರತಮ್ಯದ ವಿರುದ್ಧ ದ್ವನಿ ಎತ್ತಿ, ಮಹಿಳಾ ಪ್ರಾತಿನಿಧ್ಯ ಬಗ್ಗೆ ಮಾತನಾಡಬೇಕಿದೆ. ಈ ಬಗ್ಗೆ ಮಾತನಾಡದಿದ್ದರೆ ಮುಂದೆ ಇದೇ ನಿಮಗೆ ಮುಳುವಾಗಲಿದೆ' ಎಂದು ನಟಿಯರಿಗೆ ಎಚ್ಚರಿಕೆ ನೀಡಿದ್ದಾರೆ. ಎರಡು ವರ್ಷಗಳ ಹಿಂದೆ ತೆರೆಕಂಡಿದ್ದ 'ವಂಡರ್ ವುಮನ್' ಎಂಬ ಇಂಗ್ಲೀಷ್ ಸಿನಿಮಾ ಬಳಿಕ ಪದ್ಮಪ್ರಿಯ ಮತ್ತೆ ಕಾಣಿಸಿಕೊಂಡಿಲ್ಲ.

Vol. 40 No. 18 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com